ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

**ಶ್ರೀ ಆರ್. ಅಶೋಕ್ (ಸಾರಿಗೆ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)–**

ಅ) ಬಸ್ ಘಟಕದ ಅಭಿವೃದ್ಧಿಗಾಗಿ ಈಗಾಗಲೇ ಟೆಂಡರ್ ಕರೆದು ಕರ್ನಾಟಕ ಪಾರದರ್ಶಕ ಕಾಯ್ದೆ ಅನ್ವಯ ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಈಗಾಗಲೇ ದಿನಾಂಕ 25–06–2010 ರಿಂದ ಪ್ರಾರಂಭಿಸಲಾಗಿದ್ದು, ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಲಾಗುವುದು.

ಬಸ್ ನಿಲ್ದಾಣದ ಅಭಿವೃದ್ಧಿಗಾಗಿ ಕರ್ನಾಟಕ ಪಾರದರ್ಶಕ ಕಾಯ್ದೆ ಅನ್ವಯ ಈಗಾಗಲೇ ಟೆಂಡರ್ ಕರೆಯಲಾಗಿರುತ್ತದೆ. ಆದಷ್ಟು ಬೇಗ ಟೆಂಡರ್‌ಗಳನ್ನು ಇತ್ಯರ್ಥಪಡಿಸಿ ಗುತ್ತಿಗೆದಾರರನ್ನು ನಿಗದಿ ಪಡಿಸಿಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪ್ರಯಾಣಿಕರ ಮೂಲಭೂತ ಸೌಕರ್ಯಗಳನ್ನು ಉತ್ತಮ ಪಡಿಸಲಾಗುವುದು.

ಆ) ಬಸ್ ಘಟಕದ ಕಾಮಗಾರಿಗಳನ್ನು ದಿನಾಂಕ 25–06–2010 ರಿಂದ ಪ್ರಾರಂಭಿಸಲಾಗಿದೆ. ಬಸ್ ನಿಲ್ದಾಣದ ಕಾಮಗಾರಿಗಳಿಗಾಗಿ ಈಗಾಗಲೇ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆದಷ್ಟು ಬೇಗ ಟೆಂಡರ್‌ಗಳನ್ನು ಇತ್ಯರ್ಥಪಡಿಸಿ ಗುತ್ತಿಗೆದಾರರನ್ನು ನಿಗದಿಪಡಿಸಿ ಕೆಲಸ ಪ್ರಾರಂಭಿಸಲಾಗುವುದು.

**ಮಹಾಲಿಂಗಾಪುರದಲ್ಲಿ ಬಸ್ ಘಟಕ ಮಂಜೂರಿ ಆಗಿ ತಡೆ ಹಿಡಿಸಿರುವುದು**

**577 (1103) ಶ್ರೀ ಸಿದ್ದು ಸವದಿ (ತೇರದಾಳ್):–** ಮಾನ್ಯ ಸಾರಿಗೆ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ

ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಿಂಗಪುರ ನಗರದಲ್ಲಿ ಬಸ್ ಘಟಕ ಮಂಜೂರಾಗಿ ಸ್ಥಳಾವಕಾಶ ತೊಂದರೆಯಿಂದ ತಡೆಹಿಡಿದಿದ್ದು ನಿಜವೇ; ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಆ) ಹಾಗಿಲ್ಲದಿದ್ದಲ್ಲಿ, ಸಾಂಗ್ಲಿ, ಕೊಲ್ಹಾಪೂರ, ಬೆಳಗಾಂವ, ಬಿಜಾಪೂರ, ಬಾಗಲಕೋಟೆ, ಹುಬ್ಬಳ್ಳಿ ಈ ರೀತಿ ಎಲ್ಲ ಕಡೆ ರಸ್ತೆಗಳಿಗೆ ಮಧ್ಯ ಭಾಗವಾಗಿರುವ ಮಹಾಲಿಂಗಪರಕ್ಕೆ ಬಸ್ ಘಟಕ ಅವಶ್ಯವಿದ್ದು ಯಾವಾಗ ಪ್ರಾರಂಭಿಸಲಾಗುವುದು?

**ಶ್ರೀ ಆರ್. ಅಶೋಕ್ (ಸಾರಿಗೆ, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)**–

ಅ) ಮತ್ತು ಆ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದರಿಂದ ಮಹಾಲಿಂಗಪುರದಲ್ಲಿ ಘಟಕ ನಿವೇಶನ ಪಡೆಯುವ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಘಟಕ ನಿರ್ಮಾಣದ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

**ಮಂಡ್ಯ ಮೆಡಿಕಲ್ ಕಾಲೇಜಿನ ಕಟ್ಟಡದ ಕಾಮಗಾರಿ ಅಪೂರ್ಣವಾಗಿರುವುದು**

**578 (764) ಶ್ರೀ ಶ್ರೀನಿವಾಸ್** ಎಂ. (ಮಂಡ್ಯ):– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಂಡ್ಯ ನಗರದ ಮೆಡಿಕಲ್ ಕಾಲೇಜಿನ ಕಟ್ಟಡದ ಕಾಮಗಾರಿಯು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;